# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಕಾಳಪ್ಪ ಕೆಂಭಾವಿ,ಹಿಂದಿನ ಸಹಾಯಕ ಕೃಷಿ ಅಧಿಕಾರಿ, ರೈತ ಸಂಪರ್ಕ ಕೇಂದ್ರ ಮಾಡಬೂಳ್, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಚಿತ್ತಾಪೂರ -ಶಿಸ್ತು ಕ್ರಮ-ಮೇಲ್ಮನವಿ

******

ಓದಲಾಗಿದೆ:-

(1) ಶ್ರೀ ಕಾಳಪ್ಪ ಕೆಂಭಾವಿ,, ಸಹಾಯಕ ಕೃಷಿ ಅಧಿಕಾರಿ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಗುಲಬರ್ಗಾ ಇವರ ಮೇಲ್ಮನವಿ ದಿನಾಂಕ: 21-09-2010,03-10-2012.

(2) ಕೃಷಿ ಆಯುಕ್ತರ ಪತ್ರ ಸಂ. ಸಿಬ್ಬಂದಿ-1/ವಿಚಾರಣೆ-3/6/2007-08, ದಿ: 14-02-2013.

ಪ್ರಸ್ತಾವನೆ:-

ಶ್ರೀ ಕಾಳಪ್ಪ ಕೆಂಭಾವಿ, ಇವರು ಸಹಾಯಕ ಕೃಷಿ ಅಧಿಕಾರಿಯಾಗಿ ಗುಲಬರ್ಗಾ ಜಿಲ್ಲೆಯ ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಚಿತ್ತಾಪೂರ ತಾಲ್ಲೂಕಿನ ಮಾಡಬೂಳ ರೈತ ಸಂಪರ್ಕ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕೃಷಿ ಪರಿಕರಗಳ ಮಾರಾಟದ ರೈತರ ವಂತಿಗೆ ಬಾಬ್ತು ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಸಂಬಂಧಿಸಿದಂತೆ ರೂ. 2,60,000/-ಗಳನ್ನು ದುರುಪಯೋಗಪಡಿಸಕೊಂಡಿರುವುದಾಗಿ ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಅವರ ವಿರುದ್ಧ ಕೆ.ಸಿ.ಎಸ್. (ಸಿ.ಸಿ.ಎ) ನಿಯಮಾವಳಿ 1957ರ ನಿಯಮ 11ರಡಿಯಲ್ಲಿ ಕೃಷಿ ನಿರ್ದೇಶಕರು, ಆರೋಪಿತ ಅಧಿಕಾರಿಯವರು ದುರುಪಯೋಗ ಪಡಿಸಿಕೊಂಡಿರುವ ಮೊತ್ತ ರೂ. 2.60,000 ಮತ್ತು ರೂ.3278/-ಗಳನ್ನು ಶೇಕಡಾ 8ರ ಬಡ್ಡಿಯೊಂದಿಗೆ ಅವರು ದುರುಪಯೋಗ ಪಡಿಸಿಕೊಂಡಿರುವ ದಿನಾಂಕದಿಂದ ಹಣ ಜಮೇ ಮಾಡುವ ದಿನಾಂಕದವರೆಗೆ ವಸೂಲಾತಿ ಮಾಡಲು ಹಾಗೂ ತಾತ್ಕಾಲಿಕ ದುರುಪಯೋಗಪಡಿಸಿಕೊಂಡಿರುವ ರೂ. 1,31,605/-ಗಳಿಗೆ ಶೇಕ 8ರ ಬಡ್ಡಿಯನ್ನು ವಸೂಲು ಮಾಡಲು ಆದೇಶಿಸಿರುತ್ತಾರೆ ಎಂದು ತಿಳಿಸಿ, ತಮ್ಮ ವಿರುದ್ಧ ಮಾಡಿರುವ ಆರೋಪ ನಿರಾಧಾರವಾಗಿದ್ದು, ತಾವು ರೈತರ ಹಣವನ್ನು ದುರುಪಯೋಗ ಮಾಡದೇ ಸಂಸ್ಥೆಗೆ ತುಂಬಿರುತ್ತೇನೆ ಸಹಾಯಕ ಕೃಷಿ ನಿರ್ದೇಶಕರು ತಮ್ಮ ಮೇಲೆ ಸುಳ್ಳು ಆರೋಪ ಮಾಡಿರುತ್ತಾರೆ ಜಂಟಿ ಕೃಷಿ ನಿರ್ದೇಶಕರು ಗುಲಬರ್ಗಾ ಇವರು ದಾಸ್ತಾನು ಪುಸ್ತಕಗಳನ್ನು ಪರಿಶೀಲನೆ ಮಾಡದೇ ಇನ್ನೂ ಹಣ ತುಂಬಿರುವುದಿಲ್ಲವೆಂದು ತಪ್ಪು ವರದಿ ಕೊಟ್ಟಿರುತ್ತಾರೆಂದು ತಿಳಿಸಿ, ಕೃಷಿ ನಿರ್ದೇಶಕರು, ಹಾಗೂ ಶಿಸ್ತು ಪ್ರಾಧಿಕಾರಿಗಳು ಅದೇಶ ಸಂಖ್ಯೆ: ಸಿಬ್ಬಂದಿ-1/ವಿಚಾರಣೆ-3/6/2007-08, ದಿನಾಂಕ: 05-07-2012ರಲ್ಲಿ ಮಾಡಿದ ಆದೇಶವನ್ನು ರದ್ದುಗೊಳಿಸಬೇಕೆಂದು ಮೇಲೆ ಓದಲಾದ ಕ್ರ.ಸಂ.(1)ರಲ್ಲಿ ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಿರುತ್ತಾರೆ.

ಸದರಿ ಮೇಲ್ಮನವಿಯ ಪ್ರತಿಯನ್ನು ಕೃಷಿ ಆಯುಕ್ತರಿಗೆ ಕಳುಹಿಸಿ, ಸದರಿಯವರು ತಮ್ಮ

-2-

15

ಮೇಲ್ಮನವಿಯಲ್ಲಿ ಕೋರಿರುವ ಅಂಶಗಳ ಬಗ್ಗೆ ವರದಿ ನೀಡುವಂತೆ ಕೋರಿದ್ದು, ಈ ಪ್ರಕರಣದಲ್ಲಿ ಆರೋಪಿತ ಅಧಿಕಾರಿಯವರಾದ ಶ್ರೀ ಕಾಳಪ್ಪ ಕೆಂಭಾವಿ, ಸಹಾಯಕ ಕೃಷಿ ಅಧಿಕಾರಿಯವರ ಮೇಲಿರುವ ಆರೋಪದ ಬಗ್ಗೆ ಸಿ.ಸಿ.ಎ . ನಿಯಮ 11ರಡಿ ದೋಷಾರೋಪಣಾ ಪಟ್ಟಿ ಜಾರಿ ಮಾಡಿ, ಅವರಿಂದ ಲಿಖಿತ ರಕ್ಷಣಾ ಹೇಳಿಕೆ ಪಡೆದುಕೊಂಡು, ನಿಯಮಾನುಸಾರ ವಿಚಾರಣಾಧಿಕಾರಿ ಯವರಿಂದ ವಿಚಾರಣೆ ನಡೆಸಿದ್ದು, ವಿಚಾರಣೆಯಲ್ಲಿ ಸದರಿ ಅಧಿಕಾರಿಯವರು ರೈತರ ವಂತಿಗೆ ಹಣವನ್ನು ತುಂಬಿರುವುದಾಗಿ ಮೌಖಿಕವಾಗಿ ಹೇಳಿದ್ದು, ಯಾವುದೇ ದಾಖಲೆಗಳನ್ನು ವಿಚಾರಣೆಯ ಸಮಯದಲ್ಲಿ ಹಾಜರು ಪಡಿಸಿರುವುದಿಲ್ಲ. ಆದ್ದರಿಂದ ವಿಚಾರಣಾಧಿಕಾರಿಯವರು ಸದರಿಯವರ ಮೇಲಿರುವ ಆರೋಪಗಳು ಸಾಬಿತಾಗಿದೆಯೆಂದು ಸಲ್ಲಿಸಿದ್ದ ವಿಚಾರಣಾ ವರದಿಯನ್ನು ಆರೋಪಿತ ಅಧಿಕಾರಿಯವರಿಗೆ ಕಳುಹಿಸಿ, 2ನೇ ಕಾರಣ ಕೇಳುವ ಸೂಚನಾ ಪತ್ರವನ್ನು ಜಾರಿ ಮಾಡಿ, ಅದಕ್ಕೆ ಅವರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಸಹ ಪರಿಶೀಲಿಸಿದಾಗ ಅವರ ಹೇಳಿಕೆಯಲ್ಲಿ ಪರಿಗಣಿಸಬಹುದಾದಂತಹ ಯಾವುದೇ ದಾಖಲೆಗಳು ಹಾಗೂ ಮಾಹಿತಿಗಳು ಇಲ್ಲವಾದ್ದರಿಂದ, ಅವರು ಸದರಿ ಹಣವನ್ನು ಸರ್ಕಾರಕ್ಕೆ ಜಮೆ ಮಾಡದೇ ದುರುಪಯೋಗಪಡಿಸಿಕೊಂಡಿರುವುದು ವ್ಯಕ್ತವಾಗಿರುತ್ತದೆ. ಹಾಗಾಗಿ ಅದೇಶ ಸಂಖ್ಯೆ: ಸಿಬ್ಬಂದಿ-1/ವಿಚಾರಣೆ-3/6/2007-08, ದಿನಾಂಕ: 05-07-2012ರಲ್ಲಿ ದುರುಪಯೋಗಪಡಿಸಿಕೊಂಡಿರುವ ಹಣವನ್ನು ಬಡ್ಡಿ ಸಹಿತ ವಸೂಲಿ ಮಾಡಲು ಮಾಡಿದ ಆದೇಶವು ನಿಯಮಬದ್ಧವಾಗಿರುತ್ತದೆ ಆದ್ದರಿಂದ ಸದರಿಯವರ ಮನವಿಯಲ್ಲಿ ಪರಿಗಣಿಸಬಹುದಾದಂತಹ ಯಾವುದೇ ಅಂಶಗಳು ಇಲ್ಲವಾದ್ದರಿಂದ ಸದರಿಯವರ ಮೇಲ್ಮನವಿಯನ್ನು ಪರಿಗಣಿಸಬಾರದೆಂದು, ಮೇಲೆ ಓದಲಾದ ಕ್ರ.ಸಂ.(2)ರ ಪತ್ರದಲ್ಲಿ ಕೃಷಿ ನಿರ್ದೇಶಕರು ಹಾಗೂ ಪ್ರಕರಣದ ಶಿಸ್ತು ಪ್ರಾಧಿಕಾರಿಯವರು ಸರ್ಕಾರಕ್ಕೆ ವರದಿ ನೀಡಿರುತ್ತಾರೆ.

ಅದಲ್ಲದೇ ಶ್ರೀ ಕಾಳಪ್ಪ, ಕೆಂಭಾವಿ, ಸಹಾಯಕ ಕೃಷಿ ಅಧಿಕಾರಿ, ಹಿಂದಿನ ರೈತ ಸಂಪರ್ಕ ಕೇಂದ್ರ ಮಾಡಬೂಳ್, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಚಿತ್ತಾಪೂರ ಇವರು ಶಿಸ್ತು ಪ್ರಾಧಿಕಾರಿಗಳ ಅದೇಶ ಸಂಖ್ಯೆ: ಸಿಬ್ಬಂದಿ-1/ವಿಚಾರಣೆ-3/6/2007-08, ದಿನಾಂಕ: 05-07-2012 ರಲ್ಲಿ ಮಾಡಿದ ಆದೇಶದ ವಿರುದ್ಧ ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿಯನ್ನು ಸಹ ಪರಿಶೀಲಿಸಿದಾಗ, ಅವರು ದುರುಪಯೋಗಪಡಿಸಿಕೊಂಡಿರುವ ಹಣವನ್ನು ತುಂಬಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಸದರಿ ಮೇಲ್ಮನವಿಯೊಂದಿಗೆ ಲಗತ್ತಿಸಿರುವುದಿಲ್ಲ. ಆದ್ದರಿಂದ ಸದರಿ ಹಣವನ್ನು ಸರ್ಕಾರಕ್ಕೆ ಜಮೆ ಮಾಡದೇ ದುರುಪಯೋಗಪಡಿಸಿಕೊಂಡಿರುವುದು ದಾಖಲೆಗಳಿಂದ

498



ಕಂಡು ಬರುತ್ತದೆ. ಶ್ರೀ ಕಾಳಪ್ಪ ಕೆಂಬಾವಿ, ಸಹಾಯಕ ಕೃಷಿ ಅಧಿಕಾರಿಗಳು, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಚಿತ್ತಾಪೂರ, ಗುಲಬರ್ಗಾ ಜಿಲ್ಲೆ, ಇವರು, ತಮಗೆ ಶಿಸ್ತು ಪ್ರಾಧಿಕಾರಿಗಳಾದ ಕೃಷಿ ನಿರ್ದೇಶಕರ ಆದೇಶ ಸಂಖ್ಯೆ: ಸಿಬ್ಬಂದಿ-1/ವಿಚಾರಣೆ-3/6/2007-08, ದಿನಾಂಕ: 05-07-2012ರಲ್ಲಿ ಮಾಡಿದ ಆದೇಶವನ್ನು ರದ್ದುಗೊಳಿಸಬೇಕೆಂದು ಕೋರಿ ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿಯನ್ನು ಪುರಸ್ಕರಿಸದಿರಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂ. ಕೃಇ 12 ಕೃಪವಿ 2013,**
**ಬೆಂಗಳೂರು, ದಿನಾಂಕ: 19-04-2013.**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಕಾಳಪ್ಪ. ಕೆಂಭಾವಿ, ಹಿಂದಿನ ಸಹಾಯಕ ಕೃಷಿ ಅಧಿಕಾರಿ, ರೈತ ಸಂಪರ್ಕ ಕೇಂದ್ರ ಮಾಡಬೂಳ್, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಚಿತ್ತಾಪೂರ ಇವರಿಗೆ ಶಿಸ್ತು ಪ್ರಾಧಿಕಾರಿಯಾದ ಕೃಷಿ ನಿರ್ದೇಶಕರು, ವಿಧಿಸಿದ ದಂಡನೆ ಆದೇಶ ಸಂಖ್ಯೆ: ಸಿಬ್ಬಂದಿ-1/ವಿಚಾರಣೆ-3/6/2007-08, ದಿನಾಂಕ: 05-07-2012ರ ವಿರುದ್ಧ ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿಯನ್ನು ಪರಿಶೀಲಿಸಿದ ಸರ್ಕಾರ, ಸದರಿ ಮೇಲ್ಮನವಿಯಲ್ಲಿ ಪರಿಗಣಿಸಬಹುದಾದ ಯಾವುದೇ ಹೊಸ ಅಂಶಗಳು ಕಂಡು ಬರದಿರುವುದರಿಂದ ಅದನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ,

<u>ಪ್ರತಿ:-</u>

1) ಮಹಾಲೇಖಪಾಲರು (ಲೆಕ್ಕ ಪತ್ರ ಮತ್ತು ಲೆಕ್ಕ ತಪಾಸಣೆ ಜಿಇ-05), ಬೆಂಗಳೂರು.
2) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
3) ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
4) ಜಂಟಿ ಕೃಷಿ ನಿರ್ದೇಶಕರು, ಗುಲಬರ್ಗಾ ಜಿಲ್ಲೆ, ಗುಲಬರ್ಗಾ.
5) ಸಹಾಯಕ ಕೃಷಿ ನಿರ್ದೇಶಕರು, ಚಿತ್ತಾಪೂರ, ಗುಲಬರ್ಗಾ ಜಿಲ್ಲೆ.
6) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ,
7) ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕ, ಕೃಷಿ ಇಲಾಖೆ.
8) ಸಂಬಂಧಪಟ್ಟ ಅಧಿಕಾರಿಯವರಿಗೆ (ಕೃಷಿ ಆಯುಕ್ತರ ಮೂಲಕ)
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.